**ಓ.ಎಸ್. ನಂಬರಃ 29 /2021**

**ಪಿ . ಡಬ್ಲ್ಯೂಃ 1**

**( ಇಂದು ದಿಃ 19 /06 /2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟಿ ಸವಾಲು : ಪ್ರತಿವಾದಿಯರ ಪರ ಶ್ರೀ ಆರ್ ಜಿ ಎನ್ ವಕೀಲರಿಂದ,**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ ಭಾಷೆ ಬರುವುದಿಲ್ಲ. ನಾನು ಪ್ರತಿವಾದಿಯವರ ವಿರುದ್ಧ ಜಾಗ ಮತ್ತು ಮನೆಯನ್ನು ಬಿಟ್ಟುಕೊಡಬೇಕೆಂದು ದಾವೆಯನ್ನು ದಾಖಲಿಸಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯವರು ನನಗೆ ಸುಮಾರು 10-12 ವರ್ಷಗಳಿಂದ ಪರಿಚಯವಿರುತ್ತಾರೆ. ಸದರಿಯವರು ಮೂಲತಃ ಸಬ್ಬಕೇರಿ ಗ್ರಾಮದವರು. ದಾವೆಯನ್ನು ದಾಖಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವಾಆಸ್ತಿಗೆ ನಾನು ಹೋಗಿ ಬಂದು ಮಾಡುತ್ತಿರುತ್ತೇನೆ. ಸದ್ರಿ ಮನೆಯಲ್ಲಿ ಪ್ರತಿವಾದಿಯರೇ ಉಳಿದುಕೊಂಡಿರುತ್ತಾರೆ. ಸದ್ರಿ ಮನೆಯನ್ನು ನಾವು ಕಟ್ಟಿ ಈಗ 25 ವರ್ಷಗಳು ಆಗಿವೆ. ದಾವಾ ಆಸ್ತಿಯು ನಮಗೆ ಅಕ್ರಮ ಸಕ್ರಮ ಯೋಜನೆಯಲ್ಲಿ ಬಂದಿರುತ್ತದೆ. ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ಉಳಿದುಕೊಳ್ಳಲು ಕೊಟ್ಟು 12 ವರ್ಷಗಳು ಆಗಿವೆ.

ಮುಂದುವರೆದ **ಪಾಟಿ ಸವಾಲಿಗಾಗಿ ವಾದಿಪರ ಶ್ರೀ ಆರ್ ಜಿ ಎನ್ ವಕೀಲರು ಕಾಲಾವಕಾಶ ಕೇಳಿದ್ದರಿಂದ ಕಲ್ಪಿಸಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**